**CC No. 218/2020**
PW- 1

**ದಿನಾಂಕಃ 14-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿ ಪರ Sri. MCS ವಕೀಲರಿಂದಃ</u>**

ನಾನು B.A. L.L.B., ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ವಕೀಲ ವೃತ್ತಿಯನ್ನು ಮಾಡುತ್ತಿಲ್ಲ, ಬದಲಾಗಿ ವ್ಯವಸಾಯ ಮಾಡುತ್ತೇನೆ. ನಾನು ಸುಮಾರು 20-25 ಎಕರೆ ಜಮೀನು ಹೊಂದಿದ್ದು, ವರ್ಷಕ್ಕೆ ಸುಮಾರು 20 ಲಕ್ಷದಷ್ಟು ಆದಾಯ ತುಂಬುತ್ತೇನೆ. ನಾನು ವ್ಯವಸಾಯ ಮಾಡುತ್ತಿರುವುದರಿಂದ ಆದಾಯ ತೆರಿಗೆ ತುಂಬುತ್ತಿಲ್ಲ. ನನಗೆ ಮೇಲೆ ಹೇಳಿದಂತೆ 20-25 ಎಕರೆ ಜಮೀನು ಇರುವುದಿಲ್ಲ, ವರ್ಷಕ್ಕೆ ಸುಮಾರು 20 ಲಕ್ಷದಷ್ಟು ಆದಾಯ ಬರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಮೇಲೆ ಹೇಳಿದಂತೆ 20-25 ಎಕರೆ ಜಮೀನು ಇರುತ್ತದೆ ಎಂದು, ವರ್ಷಕ್ಕೆ ಸುಮಾರು 20 ಲಕ್ಷದಷ್ಟು ಆದಾಯ ಬರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಮಗೆ 20-25 ಎಕರೆ ಜಮೀನು ಇರುವ ಬಗ್ಗೆ, ವರ್ಷಕ್ಕೆ ಸುಮಾರು 20 ಲಕ್ಷದಷ್ಟು ಆದಾಯ ಬರುವ ಬಗ್ಗೆ ನ್ಯಾಕ್ಕೆ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಬ್ಯಾಂಕ್ ಸ್ಟೇಟ್ ಮೆಂಟನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ಬ್ಯಾಂಕ್ ಸ್ಟೇಟ್‌ಮೆಂಟಲ್ಲಿ ನನ್ನ ವಾರ್ಷಿಕ ಆದಾಯ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ಸಿಂಡಿಕೇಟ್ ಬ್ಯಾಂಕ್ ಮೂಡಲಗಿ ಶಾಖೆ, ಎಕ್ಸಿಸ್ ಬ್ಯಾಂಕ್ ಸಮೀರವಾಡಿ ಶಾಖೆ ಮತ್ತು ಡಿಸಿಸಿ ಬ್ಯಾಂಕ್ ಮೂಡಲಗಿ ಶಾಖೆಗಳಲ್ಲಿ ನನ್ನ ಎಸ್ ಬಿ ಅಕೌಂಟಗಳನ್ನು ಹೊಂದಿರುತ್ತೇನೆ. ನಾನು ಬೆಂಗಳೂರಿನ ಯಾವುದೇ ಬ್ಯಾಂಕನಲ್ಲಿ ನನ್ನ ಬ್ಯಾಂಕ್ ಖಾತೆ ಹೊಂದಿರುವುದಿಲ್ಲ. ಆರೋಪಿ ನನಗೆ 2014 ರಲ್ಲಿ ಗಿರಿಮಲ್ಲಪ್ಪ ಮಹಾದೇವಪ್ಪ ಪಾಟೀಲ ಇವರು ನನ್ನನ್ನು ಕರೆದುಕೊಂಡು ಹೋಗಿ ಗುರು ಬಿರಾದಾರ ಇವರ ಮೂಲಕ ಆರೋಪಿಯನ್ನು ನನಗೆ ಪರಿಚಯ ಮಾಡಿಸಿರುತ್ತಾರೆ. ಪ್ರಕರಣದ ಆರೋಪಿಗೆ ಹಣದ ಅವಶ್ಯಕತೆ ಇದ್ದು ನನ್ನನ್ನು ಗಿರಿಮಲ್ಲಪ್ಪ ಮಹಾದೇವಪ್ಪ ಪಾಟೀಲ ಇವರು ಆರೋಪಿಗೆ ಪರಿಚಯ ಮಾಡಿಸಿರುತ್ತಾರೆ. ಆರೋಪಿಗೆ ಹಣ ಬೇಕು ಎಂದು ಗಿರಿಮಲ್ಲಪ್ಪ ಮಹಾದೇವಪ್ಪ ಪಾಟೀಲ ಇವರು ಆರೋಪಿಯನ್ನು ಕರೆದುಕೊಂಡು ಮೂಡಲಗಿಗೆ ಬಂದು ನನಗೆ ಭೇಟಿ ಮಾಡಿಸಿರುತ್ತಾರೆ. ಆರೋಪಿ ಪರಿಚಯ ಆದ ನಂತರ ನನಗೆ ಹಣ ಬೇಕು ಎಂದು ಕೇಳಿರುತ್ತಾನೆ. ಆರೋಪಿ ನನಗೆ 25 ಲಕ್ಷ ರೂ. ಹಣ ಕೇಳಿದ್ದು ನಾನು 21 ಲಕ್ಷ ರೂ. ಹಣ ನೀಡಿರುತ್ತೇನೆ. ದಿಃ 17-05-2014 ರಂದು ರೂ. 5,20,000/- ಹಣವನ್ನು ನಗದು ರೂಪದಲ್ಲಿ ಮೂಡಲಗಿಯಲ್ಲಿ ಆರೋಪಿಗೆ ನೀಡಿದ್ದು, ದಿಃ 02-07-2014 ರಂದು ರೂ. 1,00,000/- ಹಣವನ್ನು ನಗದು ರೂಪದಲ್ಲಿ ಮೂಡಲಗಿಯಲ್ಲಿ ಆರೋಪಿಗೆ ನೀಡಿದ್ದು, ದಿಃ 08-08-2014 ರಂದು ಆರೋಪಿ ಹೇಳಿದ್ದಕ್ಕಾಗಿ RTGS ಮುಖಾಂತರ ರೂ.7,40,000/- ಹಣವನ್ನು

ಆರ್ಯ ಮೌರ್ಯ ಆರ್ಟ್ಸ ಅವರ ಅಕೌಂಟಿಗೆ ಹಾಕಿರುತ್ತೇನೆ. ದಿಃ 02-09-2014 ರಂದು ಆರೋಪಿ ಹೇಳಿದ್ದಕ್ಕಾಗಿ RTGS ಮುಖಾಂತರ ರೂ.1,60,000/- ಹಣವನ್ನು ಕಾಲಭೈರವ ಆರ್ಟ್ಸ ಅವರ ಅಕೌಂಟಿಗೆ ಹಾಕಿರುತ್ತೇನೆ. ದಿಃ 03-09-2014 ರಂದು ಆರೋಪಿ ಹೇಳಿದ್ದಕ್ಕಾಗಿ RTGS ಮುಖಾಂತರ ರೂ.5,00,000/- ಹಣವನ್ನು ಆರ್ಯ ಮೌರ್ಯ ಆರ್ಟ್ಸ ಅವರ ಅಕೌಂಟಿಗೆ ಹಾಕಿರುತ್ತೇನೆ. ದಿಃ 04-09-2014 ರಂದು ಆರೋಪಿ ಹೇಳಿದ್ದಕ್ಕಾಗಿ RTGS ಮುಖಾಂತರ ರೂ.50,000/- ಹಣವನ್ನು ಕಾಲಭೈರವ ಆರ್ಟ್ಸ ಅವರ ಅಕೌಂಟಿಗೆ ಹಾಕಿರುತ್ತೇನೆ.

ಆರೋಪಿ ತನಗೆ ಹಣ ಬೇಕು ಎಂದು ಏಪ್ರೀಲ್ 2014 ರಲ್ಲಿ ಕೇಳಿರುತ್ತಾರೆ. ಆರೋಪಿ ನನಗೆ ಏಪ್ರೀಲ್ 2014 ರಲ್ಲಿ ಹಣ ಕೇಳಿದ್ದು ನಿರ್ದಿಷ್ಟ ದಿನಾಂಕ ನನಗೆ ತಿಳಿದಿರುವುದಿಲ್ಲ. ಆರೋಪಿ ನನಗೆ ಹಣ ಕೇಳಿದ ಸಮಯದಲ್ಲಿ ನನ್ನ ಜೊತೆ ಗಿರಿಮಲ್ಲಪ್ಪ ಪಾಟೀಲ, ಗುರು ಬಿರಾದಾರ ಮತ್ತು ಶಿವಬಸ್ಸು ನೇಮಗೌಡರ ಹಾಜರಿದ್ದರು. ಆರೋಪಿ ಪಂಧ್ಯ ಎಂಬ ಕನ್ನಡ ಚಲನಚಿತ್ರ ನಿರ್ಮಾಣ ಮಾಡಿದ್ದು ಸದರಿ ಚಲನಚಿತ್ರ ಬಿಡುಗಡೆಯ ವೇಳೆಗೆ ಹಣ ಬೇಕು ಎಂದು ನನ್ನಿಂದ ಸದರಿ ಹಣ ಪಡೆದುಕೊಂಡಿರುತ್ತಾರೆ. ಈ ವಿಚಾರವನ್ನು ನನ್ನ ದೂರಿನಲ್ಲಾಗಲೀ ಅಥವಾ ನೊಟೀಸಿನಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಚಲನಚಿತ್ರ ನಿರ್ಮಾಪಕರಾಗಿದ್ದು ಆರ್ಥಿಕವಾಗಿ ಸ್ಥಿತಿವಂತರಿದ್ದು ನನ್ನ ಹತ್ತಿರ ಹಣ ಕೇಳುವ ಅಗತ್ಯ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಸಾಲಕ್ಕಾಗಿ ಯಾವುದೇ ಹಣವನ್ನು ಕೇಳಿರುವುದಿಲ್ಲ ಮತ್ತು ನಾನು ಆರೋಪಿಗೆ ಪ್ರಸ್ತುತ ಪ್ರಕರಣದಲ್ಲಿ ಹೇಳಿರುವಂತೆ ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮೇಲಿನ ಪಾಟೀ ಸವಾಲಿನಲ್ಲಿ ಆರ್ಯ ಮೌರ್ಯ ಆರ್ಟ್ಸನ ಅಕೌಂಟಗೆ ಆರೋಪಿ ಹೇಳಿದ್ದಕ್ಕಾಗಿ ಹಣ ಹಾಕಿರುತ್ತೇನೆಂದು ಹೇಳಿದ್ದು ಅದಕ್ಕೆ ಸಂಬಂಧಪಟ್ಟಂತೆ ನನ್ನ ಮತ್ತು ಆರೋಪಿ ಮಧ್ಯ ಯಾವುದೇ ಕರಾರು ಪತ್ರ ಮಾಡಿಕೊಂಡಿರುವುದಿಲ್ಲ. ಆರ್ಯ ಮೌರ್ಯ ಆರ್ಟ್ಸನವರು ನನಗೆ ಪರಿಚಯ ಇರುವುದಿಲ್ಲ. ಆರೋಪಿ ನನಗೆ ಕರೆದುಕೊಂಡು ಹೋಗಿ ಪರಿಚಯ ಮಾಡಿಸಿರುತ್ತಾನೆ. ಆರ್ಯ ಮೌರ್ಯ ಆರ್ಟ್ಸನ ಪ್ರೊಪರೈಟರ್ ಯಾರು ಎಂದು ನನಗೆ ತಿಳಿದಿರುವುದಿಲ್ಲ. ಆರ್ಯ ಮೌರ್ಯ ಆರ್ಟ್ಸನ ಪ್ರೊಪರೈಟರ್ ನ್ನು ನಾನು ಭೇಟಿ ಮಾಡಿ ಮಾತನಾಡಿರುತ್ತೇನೆ. ನಾನು ಆರ್ಯ ಮೌರ್ಯ ಆರ್ಟ್ಸನವರಿಗೆ ಹಣ ನೀಡುವ ಬಗ್ಗೆ ಆರ್ಯ ಮೌರ್ಯ ಆರ್ಟ್ಸನ ಪ್ರೊಪರೈಟರ್ ಜೊತೆ ಹಣ ನೀಡುವ ವಿಚಾರವಾಗಿ ಮಾತನಾಡಿರುತ್ತೇನೆ. ಸದರಿ ಪ್ರಸ್ತುತ ಪ್ರಕರಣದಲ್ಲಿ ಹೇಳಿರುವ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಆರ್ಯ ಮೌರ್ಯ ಆರ್ಟ್ಸನ ಪ್ರೊಪರೈಟರ್ ನ್ನು ನನ್ನ ಪರವಾಗಿ ಸಾಕ್ಷಿ ಮಾಡಿಸುವುದಕ್ಕೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಆರೋಪಿ ತನ್ನ ಪರವಾಗಿ ಆರ್ಯ ಮೌರ್ಯ ಆರ್ಟ್ಸನ ಅಕೌಂಟಗೆ ಹಣ ಹಾಕಿ ಎಂದು ಯಾವತ್ತೂ ಹೇಳಿರುವುದಿಲ್ಲ ಮತ್ತು ಈ ವಿಚಾರವಾಗಿ ನನ್ನ ಮತ್ತು ಆರೋಪಿ ಮಧ್ಯ ಯಾವುದೇ ಕರಾರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ಮಧ್ಯ ಈ

ವಿಚಾರವಾಗಿ ಕರಾರು ಆಗಿರುತ್ತದೆ. ಸದರಿ ಕರಾರನ್ನು ನ್ಯಾ. ಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

ನಾನು ನನ್ನ ಸ್ನೇಹಿತ ಗಿರಿಮಲ್ಲಪ್ಪ ಅವರ ಜೊತೆ ಪಂಥ್ಯ ಚಲನಚಿತ್ರದ ಹಂಚಿಕೆಯ ಹಕ್ಕುಗಾಗಿ ಪ್ರಕರಣದ ಆರೋಪಿಯನ್ನು ಭೇಟಿ ಮಾಡಿರುತ್ತೇನೆಂದರೆ ಸರಿ. ಚಲನಚಿತ್ರದ ಹಂಚಿಕೆಯ ಹಕ್ಕುಗಾಗಿ ನನ್ನ ಮತ್ತು ಆರೋಪಿಯ ನಡುವೆ ಒಂದು ಕರಾರು ಪತ್ರ ಆಗಿರುತ್ತದೆ ಎಂದರೆ ಸರಿ. ಸದರಿ ಕರಾರಿನಲ್ಲಿ ಚಲನಚಿತ್ರದ ಬಿಡುಗಡೆಯ ಮುಂಚಿತವಾಗಿ ಆರೋಪಿಗೆ ನಾನು ರೂ.15 ಲಕ್ಷ ಗಳನ್ನು ನೀಡಬೇಕೆಂದು ಉಲ್ಲೇಖವಾಗಿರುತ್ತದೆ ಎಂದರೆ ಸರಿಯಲ್ಲ. ಬಿಡುಗಡೆಯ ನಂತರ ಬಂದ ಆದಾಯದಲ್ಲಿ ಶೇ.30 ರಷ್ಟು ಹಣವನ್ನು ನೀಡಬೇಕೆಂದು ಕರಾರಿನಲ್ಲಿ  ಉಲ್ಲೇಖವಾಗಿರುತ್ತದೆ ಎಂದರೆ ನನಗೆ ತಿಳಿದಿರುವುದಿಲ್ಲ. ಈ ಕರಾರು ಪ್ರಕಾರ (ಸಿನಿಮಾ ಹಂಚಿಕೆಯ ಹಕ್ಕಿನ ಕರಾರು) ರೂ.1,60,000/- ಒಂದು ಸಲ ಮತ್ತು ಇನ್ನೊಂದು ಸಲ ರೂ.50,000/- ಗಳನ್ನು NEFT ಮುಖಾಂತರ ಆರೋಪಿಗೆ ನಾನು ಹಣ ನೀಡಿರುತ್ತೇನೆಂದರೆ ಸರಿ.  ಸಿನಿಮಾ ಹಂಚಿಕೆಗಾಗಿ ನನ್ನ ಮತ್ತು ಆರೋಪಿಯ ನಡುವೆ ಆದ ಕರಾರಿನ ಪ್ರಕಾರ ರೂ.15 ಲಕ್ಷ ದಲ್ಲಿ ರೂ.2,10,000/- ಗಳನ್ನು ಹೊರತುಪಡಿಸಿ ಉಳಿದ ಹಣವನ್ನು ನಾನು ಆರೋಪಿಗೆ ಕೊಟ್ಟಿರುವುದಿಲ್ಲ ಎಂದರೆ ಆರೋಪಿ ಹೇಳಿದ್ದಕ್ಕಾಗಿ ಆರ್ಯ ಮೌರ್ಯ ಆರ್ಟ್ಸ ಅವರ ಅಕೌಂಟಗೆ ಸದರಿ ಹಣ ಹಾಕಿರುತ್ತೇನೆ. ನಾನು ಮತ್ತು  ಆರ್ಯ ಮೌರ್ಯ ಆರ್ಟ್ಸನ ಪ್ರೊಪರೈಟರ ಒಳ್ಳೆಯ ಸ್ನೇಹಿತರಾಗಿದ್ದು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರಸ್ತುತ ಪ್ರಕರಣವನ್ನು ಮತ್ತು ಸಿಸಿ ನಂ. 220/2020 ನ್ನು ಸುಳ್ಳಾಗಿ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

ಪಂಥ್ಯ ಚಲನಚಿತ್ರದ ಸಿನಿಮಾ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನನ್ನದು ಯಾವುದೇ ಪಾತ್ರ ಇರುವುದಿಲ್ಲ. ಪಂಥ್ಯ ಚಲನಚಿತ್ರಕ್ಕೆ ನಾನು ಒಬ್ಬ ಹಂಚಿಕೆದಾರ ಎಂದರೆ ಸರಿಯಲ್ಲ. ಪಂಥ್ಯ ಚಲನಚಿತ್ರ 2014 ರಲ್ಲಿ ಬಿಡುಗಡೆಯಾಗಿರುತ್ತದೆ. ಪಂಥ್ಯ ಚಲನಚಿತ್ರ ಬಿಡುಗಡೆಯಾದ ನಂತರ 15 ದಿನಗಳವರೆಗೆ ಮೂಡಲಗಿ ಚಿತ್ರಮಂದಿರದಲ್ಲಿ ಪ್ರದರ್ಶನವಾಗಿರುತ್ತದೆ, ಬೇರೆ ಸ್ಥಳಗಳಲ್ಲಿ ಸದರಿ ಚಲನಚಿತ್ರದ ಪ್ರದರ್ಶನದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪಂಥ್ಯ ಚಲನಚಿತ್ರ ಸರಿಯಾಗಿ ಪ್ರದರ್ಶಿತವಾಗದೇ ನಿರ್ಮಾಪಕರಿಗೆ ಲಾಸ್ ಆಗಿರುತ್ತದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಚಲನಚಿತ್ರ ಸರಿಯಾಗಿ ಪ್ರದರ್ಶಿತವಾಗದೇ ನಿರ್ಮಾಪಕರಿಗೆ (ಪ್ರಸ್ತುತ ಆರೋಪಿಗೆ) ಲಾಸ್ ಆದ ನಂತರ ಕರಾರಿನ ಪ್ರಕಾರ ರೂ.15 ಲಕ್ಷ ಗಳಲ್ಲಿ ಉಳಿದ ಹಣವನ್ನು ಕೊಡದಿದ್ದರೂ ಸಹ, ಹಂಚಿಕೆಯ ಕರಾರಿನ ಪ್ರಕಾರ ನನ್ನ ಶೇರ್ ಶೇ. 30 ರಷ್ಟು ಕೊಡಬೇಕೆಂದು ನಾನು ಆರೋಪಿಗೆ ಕೇಳಿರುತ್ತೇನೆಂದರೆ ಲಾಸ್ ಆದರೂ ಸಹ ಹಣ ಕೊಡುತ್ತೇನೆಂದು ಆರೋಪಿ ಒಪ್ಪಿಕೊಂಡಿರುತ್ತಾನೆ. ನಾನು ಆರೋಪಿಗೆ ನೀಡಿದ ರೂ.2,10,000/-  ಹಣದ ತಿರುವಳಿಗಾಗಿ ಆರೋಪಿ ನನಗೆ 2 ಚೆಕ್ಕುಗಳನ್ನು ಪ್ರಸ್ತುತ ಪ್ರಕರಣದಲ್ಲಿ ಇರುವ ನಿಪಿ- 1 ಮತ್ತು ಸಿಸಿ ನಂ. 220/2020 ರಲ್ಲಿರುವ

ನಿಪಿ- 1 ಚೆಕ್ಕನ್ನು ನೀಡಿರುತ್ತಾನೆಂದರೆ ಸರಿಯಲ್ಲ. ಸದರಿ 2 ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಪ್ರಸ್ತುತ ಪ್ರಕರಣ ಮತ್ತು ಸಿಸಿ ನಂ. 220/2020 ನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ.

2014 ರಲ್ಲಿ ಆರೋಪಿಗೆ ನಾನು ಹಣ ನೀಡಿದ್ದೇನೆಂದು ಹೇಳಿದ್ದು ಸೆಕ್ಯುರಿಟಿಗಾಗಿ ಆರೋಪಿಯಿಂದ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ನಿಪಿ- 12 (ಸಿಸಿ ನಂ. 220/2020) ದಾಖಲಾತಿಯನ್ನು ಆರೋಪಿಯು ಬರೆದುಕೊಂಡು ಬಂದು ಮೂಡಲಗಿಯಲ್ಲಿ ನನಗೆ ನೀಡಿರುತ್ತಾರೆ. ನಿಪಿ- 12 (ಸಿಸಿ ನಂ. 220/2020) ದಾಖಲಾತಿಯನ್ನು ಆರೋಪಿ ದಿಃ 18-12-2016 ರಂದು ಆರೋಪಿ ಬರೆದು ನನಗೆ ಕೊಟ್ಟಿರುತ್ತಾರೆ. ನಿಪಿ- 12 (ಸಿಸಿ ನಂ. 220/2020) ನ್ನು ನನ್ನ ಮುಂದೆ ಬರೆದಿರುವುದಿಲ್ಲ. ನಿಪಿ- 12 ನ್ನು ಆರೋಪಿ ನನಗೆ ಕೊಡುವಾಗ ಗಿರಿಮಲ್ಲಪ್ಪ ಪಾಟೀಲ, ಗುರು ಬಿರಾದಾರ ಮತ್ತು ಶಿವಬಸ್ಸು ನೇಮಗೌಡರ ಹಾಜರಿದ್ದರು. ನಿಪಿ- 12 (ಸಿಸಿ ನಂ. 220/2020) ನ್ನು ಎಲ್ಲಿ ಬರೆಯಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ ಆದರೆ ಮೂಡಲಗಿಯಲ್ಲಿ ಆರೋಪಿ ನನಗೆ ನೀಡಿರುತ್ತಾನೆ. ನಿಪಿ- 12 (ಸಿಸಿ ನಂ. 220/2020) ದಾಖಲಾತಿ ಆರೋಪಿ ನನಗೆ ಕೊಟ್ಟಿದ್ದಾನೆಂದು ನಾನು ವಕೀಲರ ಮೂಲಕ ನೀಡಿದ ನಿಪಿ- 4 ನೊಟೀಸಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಆರೋಪ ಪ್ರತ್ಯುತ್ತರ ನೊಟೀಸನ್ನು ಕಳುಹಿಸಿದ ನಂತರ ನಿಪಿ- 12 (ಸಿಸಿ ನಂ. 220/2020) ದಾಖಲಾತಿಯನ್ನು ಸೃಷ್ಟಿ ಮಾಡಿ ಪ್ರಕರಣದಲ್ಲಿ ನ್ಯಾ. ಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನಿಪಿ- 12 (ಸಿಸಿ ನಂ. 220/2020) ದಾಖಲಾತಿಯನ್ನು ಆರೋಪಿ ನನಗೆ ಸಿನಿಮಾ ಹಂಚಿಕೆಯ ವಿಚಾರವಾಗಿ ಆದ ಕರಾರಿನ ಸಮಯದಲ್ಲಿ ನೀಡಿರುತ್ತಾನೆಂದರೆ ಸರಿಯಲ್ಲ. ನಿಪಿ- 9 (ಸಿಸಿ ನಂ. 220/2020) ದಾಖಲಾತಿಯಲ್ಲಿ ಹೇಳಿರುವ 5.2 ಲಕ್ಷ, 1.3 ಲಕ್ಷ ಹಣವನ್ನು ನಾನು ನನ್ನ ಅವಶ್ಯಕತೆಗಾಗಿ ನನ್ನ ಬ್ಯಾಂಕಿನಿಂದ withdraw ಮಾಡಿಕೊಂಡಿದ್ದು ಅದನ್ನು ಪ್ರಸ್ತುತ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ.

ನಾನು ಆರೋಪಿಗೆ ನೀಡಿದ ರೂ.2,10,000/- ರೂ. ಹಣದ ತಿರುವಳಿಗಾಗಿ ರೂ.1,00,000/- ಹಣವನ್ನು NEFT ಮುಖಾಂತರ ನನಗೆ ನೀಡಿರುತ್ತಾರೆಂದರೆ ಸರಿ. 2 ಸಂದರ್ಭಗಳಲ್ಲಿ ರೂ. 70 ಸಾವಿರ ಒಂದು ಸಲ, ರೂ.80 ಸಾವಿರ ಮತ್ತೊಂದು ಸಲ ಹಣವನ್ನು ನನಗೆ ನಗದು ರೂಪದಲ್ಲಿ ನೀಡಿರುತ್ತಾರೆಂದರೆ ಸರಿಯಲ್ಲ. ರೂ.2,10,000/- ಹಣದ ತಿರುವಳಿಗಾಗಿ ನೀಡಿರುವ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಪ್ರಸ್ತುತ ಪ್ರಕರಣ ದಾಖಲಿಸಿರುತ್ತೇನೆಂದರೆ ಟಿವಿಯಲ್ಲಿ ಚಲನಚಿತ್ರ ಮತ್ತು ಅದರ ಹಾಡುಗಳು ಪ್ರದರ್ಶನವಾಗುವುದರಿಂದ 40-60 ಲಕ್ಷ ರೂ. ಹಣ ಬರುತ್ತದೆ ಎಂದು ಆರೋಪಿ ನನಗೆ ಎಲ್ಲ ಹಣ ನೀಡುತ್ತೇನೆಂದು ಹೇಳಿರುತ್ತಾನೆ. ಆರೋಪಿಗೆ ನಾನು ರೂ.5,20,000/- ನಗದು ಹಣ, ರೂ.1,60,000/- ಒಂದು ಸಲ, ರೂ.50,000/- ರೂ. RTGS ಮುಖಾಂತರ ನೀಡಿರುತ್ತೇನೆ. ನಾನು ಆರೋಪಿಗೆ ರೂ.2,10,000/- ಹಣವನ್ನು ಕೊಟ್ಟಿದ್ದು ಬೇರೆ ಯಾವುದೇ ಹಣವನ್ನು ನೀಡಿರುವುದಿಲ್ಲ

ಎಂದರೆ ಸರಿಯಲ್ಲ. ಆರೋಪಿ ಆರ್ಯ ಮೌರ್ಯ ಆರ್ಟ್ಸ ನವರಿಗೆ ಹಣ ಕೊಡಿ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರಸ್ತುತ ಪ್ರಕರಣದಲ್ಲಿ ಮತ್ತು ಸಿಸಿ ನಂ. 220/2020 ರಲ್ಲಿರುವ ಚೆಕ್ಕುಗಳಲ್ಲಿ ಆರೋಪಿ ಬರೆದು ನನಗೆ ನೀಡಿರುತ್ತಾನೆ. ಪ್ರಸ್ತುತ ಪ್ರಕರಣದಲ್ಲಿ ಮತ್ತು ಸಿಸಿ ನಂ. 220/2020 ರಲ್ಲಿರುವ ಚೆಕ್ಕುಗಳಲ್ಲಿನ ಆರೋಪಿಯ ಸಹಿ ಮತ್ತು ಇತರ ವಿವರಗಳು ಶಾಹಿಯಲ್ಲಿ ವ್ಯತ್ಯಾಸ ಮತ್ತು ಹಸ್ತಾಕ್ಷರಗಳಲ್ಲಿ ವ್ಯತ್ಯಾಸವಿರುತ್ತದೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ನೀಡಿದ ರೂ.2,10,000/- ರೂ. ಹಣದ ತಿರುವಳಿಗಾಗಿ ಪ್ರಸ್ತುತ ಪ್ರಕರಣದಲ್ಲಿ ಮತ್ತು ಸಿಸಿ ನಂ. 220/2020 ರಲ್ಲಿರುವ ಚೆಕ್ಕುಗಳನ್ನು ಆರೋಪಿ ಕೊಟ್ಟಿರುತ್ತಾನೆಂದರೆ ಸರಿಯಲ್ಲ. ಪ್ರಕರಣದಲ್ಲಿ ಮತ್ತು ಸಿಸಿ ನಂ. 220/2020 ರಲ್ಲಿರುವ ಚೆಕ್ಕುಗಳನ್ನು ನಾನು ಆರೋಪಿಯಿಂದ ಬೆಂಗಳೂರಿನಲ್ಲಿ ತೆಗೆದುಕೊಂಡಿದ್ದು, ಆ ಸಮಯದಲ್ಲಿ ನಾನು ಗಿರಿಮಲ್ಲಪ್ಪ ಪಾಟೀಲ, ಶಿವಬಸ್ಸು ನೇಮಗೌಡರ ಇವರು ಬೆಂಗಳೂರಿನ ವಾಟರ್ ಟ್ಯಾಂಕ ಹತ್ತಿರ ಆರೋಪಿಯನ್ನು ಭೇಟಿ ಮಾಡಿ ಸದರಿ ಚೆಕ್ಕುಗಳನ್ನು ತೆಗೆದುಕೊಂಡಿರುತ್ತೇನೆ. ಆರೋಪಿ ನನ್ನಿಂದ ಯಾವುದೇ ಹಣ ಸಾಲವಾಗಿ ಕೇಳಿರುವುದಿಲ್ಲ ಮತ್ತು ತೆಗೆದುಕೊಂಡಿರುವುದಿಲ್ಲ, ನಿಪಿ- 12 (ಸಿಸಿ ನಂ. 220/2020) ಮತ್ತು ಆರೋಪಿ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರು ದಾಖಲಿಸಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.